ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ದಿನಾಂಕ 12-07-07 ರಂದು ನಾಲ್ಕನೇ ಪಟ್ಟಿಯ ಲಿಖಿಯ ಮೂಲಕ ಉತ್ತರಿಸುವ 40 ಪ್ರಶ್ನೆಗಳ ಪೈಕಿ 36 ಉತ್ತರಗಳನ್ನು ಮಂಡಿಸಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಸಿದ್ದು ಸವದಿ: ಒಂದು ನಿಮಿಷದಲ್ಲಿ ಕೇಳುತ್ತೇನೆ ಅವಕಾಶ ಕೊಡಿ ಸರ್.

ಅಧ್ಯಕ್ಷರು: ಆಯಿತು ಕುಳಿತುಕೊಳ್ಳಿ, ಏನು ಮಾಡುವುದಕ್ಕೆ ಆಗುವುದಿಲ್ಲ. ನಿಮಗೆ ಇಷ್ಟ ಬಂದ ಹಾಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ದು ಸವದಿ: ಸಾಕಷ್ಟು ಬಾರಿ ಅವಕಾಶ ಕೊಟ್ಟಿದ್ದೀರಿ. ದಯಮಾಡಿ ಒಂದು ಅವಕಾಶ ಕೊಡಿ.

ಅಧ್ಯಕ್ಷರು: ಈಗ ಅವಕಾಶ ಇಲ್ಲ. ಒಂದು ಗಂಟೆಯಾಗ ಮೇಲೆ ನೀವು ಲೇಟಾಗಿ ಬಂದಿರಿ. ಪ್ರಶ್ನೆಯೆಲ್ಲ ಲ್ಯಾಪ್ಸ್ ಆಯಿತು.

ಶ್ರೀ ಸಿದ್ದು ಸವದಿ: ಎರಡೆರಡು ಗಂಟೆಯಾಗಿದೆ, ಒಂದೇ ಒಂದು ನಿಮಿಷ ಅವಕಾಶ ಮಾಡಿಕೊಡಿ. ನನ್ನದು ಬಹಳ ಮುಖ್ಯವಾದ ಪ್ರಶ್ನೆಯಿದೆ.

ಅಧ್ಯಕ್ಷರು: ದಯಮಾಡಿ ಸದಸ್ಯರು ಅರ್ಥ ಮಾಡಿಕೊಳ್ಳಿ. ಬಿಎಸಿಯಲ್ಲಿ ತೀರ್ಮಾನವಾಗಿದೆ. ಈಗಾಗಲೇ ಒಂದು ಗಂಟೆಯಾಯಿತು. ಇಲ್ಲದಿದ್ದರೆ ರಿಪಿಟೇಷನ್ ಆಗುತ್ತದೆ. ಪ್ರತಿ ದಿನ ಎರಡು ಗಂಟೆ ಮಾಡಬೇಕಾಗುತ್ತದೆ. ಅದು ಸಾಧ್ಯವಾಗುವುದಿಲ್ಲ.

ಶ್ರೀ ನೆ ಲ ನರೇಂದ್ರ ಬಾಬು: ಹೊಸ ಸದಸ್ಯರಿಗೆ ಅವಕಾಶ ಮಾಡಿಕೊಡಿ.

ಶ್ರೀ ಜೆ.ಎಸ್ ಗಡ್ಡದೇವರ ಮಠ್: ನಮ್ಮ ಪ್ರಶ್ನೆ ಬರುವುದು ಅಪರೂಪ ನಮಗೆ ಅವಕಾಶ ಮಾಡಿಕೊಡಿ.